**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಸಿ.ಎನ್.ಮಂಜೇಗೌಡ ರವರ 'ನಿಯಮ 330 ಎ' ರಡಿಯ ಪ್ರಸ್ತಾವಕ್ಕೆ ಉತ್ತರ.**

**ವಿಷಯ:**

ಮೈಸೂರು ನಗರವು "ಪಾರಂಪರಿಕ ನಗರ ಎಂಬುದು ರಾಜ್ಯದ ಜನರಿಗೆ ಗೊತ್ತಿರುವ ವಿಷಯ. ಆದರೆ ಇಂದು ಇಂತಹ ಪಾರಂಪರಿಕ ಸೌಂದರ್ಯವೇ ನಶಿಸುವ ಭೀತಿ ಎದುರಾಗಿದೆ. ಮಹಾರಾಜರ ನಾಡು ಮೈಸೂರಿನಲ್ಲಿ 600ಕ್ಕೂ ಹೆಚ್ಚು ಪಾರಂಪರಿಕ ಕಟ್ಟಡಗಳಿವೆ. ಇವುಗಳಲ್ಲಿ ರಕ್ಷಣೆಗೆ ಅಗತ್ಯ ಇರುವ 234 ಕಟ್ಟಡಗಳನ್ನು ಪಾರಂಪರಿಕ ತಜ್ಞರ ಸಮಿತಿ ಸರ್ವೆ ಮೂಲಕ ಗುರುತಿಸಿದೆ. ಇದರಲ್ಲಿ 131 ಕಟ್ಟಡಗಳನ್ನು ಜಿಲ್ಲಾಡಳಿತವೇ ಪಾರಂಪರಿಕ ಪಟ್ಟಿಗೆ ಸೇರಿಸಿದೆ. 150 ವರ್ಷಗಳನ್ನು ಪೂರೈಸಿದ 125 ಕಟ್ಟಡಗಳಿವೆ. ಇವುಗಳಲ್ಲಿ ಕೆಲವು ಕುಸಿದಿದ್ದು, ಇನ್ನು ಕೆಲವು ಸಂಪೂರ್ಣ ಶಿಥಿಲಾವಸ್ಥೆ ತಲುಪಿದ್ದು, ಯಾವಾಗ ಬೇಕಾದರೂ ಕುಸಿಯುವ ಅಪಾಯ ಎದುರಿಸುತ್ತಿವೆ. ಒಟ್ಟು 25 ಕಟ್ಟಡಗಳು ಅತ್ಯಂತ ಅಪಾಯಕಾರಿ ಸ್ಥಿತಿಯಲ್ಲಿವೆ. ಈ ಎಲ್ಲವೂ ಪ್ರಸಕ್ತ ಮುಂಗಾರು ದಾಟುವುದೇ ಅನುಮಾನ ಎನ್ನುತ್ತಾರೆ ತಜ್ಞರು. ಈ ಹಿನ್ನೆಲೆಯಲ್ಲಿ ಮೈಸೂರಿಗೆ ಪಾರಂಪರಿಕ ನಗರಿ ಪಟ್ಟ ಉಳಿಸಿಕೊಳ್ಳಬೇಕಾದಲ್ಲಿ ಅವುಗಳ ರಕ್ಷಣೆಗೆ ವಿಶೇಷ ಯೋಜನೆ ರೂಪಿಸಬೇಕಿದ್ದು, ಬಜೆಟ್‌ನಲ್ಲಿ ಅನುದಾನ ಪ್ರಕಟಿಸುವ ಅಗತ್ಯವಿದೆ. ಲ್ಯಾನ್ಸ್‌ಡೌನ್ ಕಟ್ಟಡದ ಭಾಗ 2012ರಲ್ಲಿಯೇ ಕುಸಿದಿದ್ದರೂ ಇಲ್ಲಿಯವರೆಗೆ ಅದರ ರಕ್ಷಣೆಗೆ ಕ್ರಮ ತೆಗೆದುಕೊಳ್ಳಲು ಸಾಧ್ಯವಾಗಿಲ್ಲ. ಇಲಾಖೆ, ಮಹಾನಗರ ಪಾಲಿಕೆಯಲ್ಲಿ ಇವುಗಳಿಗೆ ಯಾವುದೇ ಅನುದಾನ ಇಲ್ಲದೆ ಮೂಕಪ್ರೇಕ್ಷಕವಾಗಿದೆ.

ಇಲ್ಲಿ ತನಕ ಆಡಳಿತ ನಡೆಸಿದ ಸರ್ಕಾರಗಳು ಪಾರಂಪರಿಕ ಕಟ್ಟಡಗಳನ್ನು ಉಳಿಸಿಕೊಳ್ಳಲು ಯಾವುದೇ ರೀತಿಯ ಪ್ರಾಮಾಣಿಕ ಪ್ರಯತ್ನಗಳನ್ನು ನಡೆಸಿಲ್ಲ. 2004 ರಿಂದ 20 ಪಾರಂಪರಿಕ ಪ್ರದೇಶಗಳನ್ನು ರಾಜ್ಯದಲ್ಲಿ ಘೋಷಿಸಿದೆ. ಆದರೆ ಘೋಷಣೆ ಬಿಟ್ಟರೇ ಅವುಗಳ ಅಭಿವೃದ್ಧಿ ಅಥವಾ ರಕ್ಷಣೆಗೆ ಯಾವುದೇ ಕ್ರಮಕೈಗೊಂಡಿಲ್ಲ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳಿಗೆ ಜಿಲ್ಲೆಯ ಹೆರಿಟೇಜ್ ಕಟ್ಟಡಗಳ ಸ್ಥಿತಿಯ ಅರಿವಿದೆ ಎಂಬುದಾಗಿ ಭಾವಿಸುತ್ತೇನೆ. ಈಗಾಗಲೇ ಮಹಾನಗರ ಪಾಲಿಕೆ ನಗರದಲ್ಲಿರುವ ಐತಿಹಾಸಿಕ ಕಟ್ಟಡಗಳನ್ನು ಉಳಿಸಿಕೊಳ್ಳಲು ಕನಿಷ್ಟ ಸಾವಿರ ಕೋಟಿ ರೂ.ಗಳ ಅನುದಾನವನ್ನು ಕೋರಿದೆ. ಈ ಎಲ್ಲಾ ಹಿನ್ನೆಲೆಯಲ್ಲಿ ಈ ಸಾಲಿನ ಆಯವ್ಯಯದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಕನಿಷ್ಟ 500 ಕೋಟಿ ರೂ.ಗಳ ಅನುದಾನವನ್ನು ಬಿಡುಗಡೆ ಮಾಡುವಂತೆ ಒತ್ತಾಯಿಸಲು ನಿಯಮ 330 ಎ ರಡಿಯಲ್ಲಿ ಪ್ರಸ್ತಾಪಿಸಲು ಅನುಮತಿ ಕೋರುತ್ತೇನೆ.

**ಉತ್ತರ:**

ನಗರಾಭಿವೃದ್ಧಿ ಇಲಾಖೆಯು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ-13 (ಇ) ರಡಿ ರಾಜ್ಯದ ನಗರ / ಪಟ್ಟಣಗಳ ವಲಯ ನಿಯಮಾವಳಿಗಳಿಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ನಅಇ 04 ಟಿಟಿಪಿ 2013, ದಿನಾಂಕ: 21.04.2020 ರನ್ವಯ ತಿದ್ದುಪಡಿ ತಂದಿದೆ. ಇದರನ್ವಯ ಜ್ಹೋನಲ್ ರೆಗ್ಯೂಲೇಷನ್ (ಅಮೆಂಡ್‌ಮೆಂಟ್) 2020 ಅಸ್ತಿತ್ವಕ್ಕೆ ಬಂದಿರುತ್ತದೆ. ಸದರಿ ರೆಗ್ಯೂಲೇಷನ್‌ರನ್ವಯ ಬೆಂಗಳೂರು ಜಿಲ್ಲೆಯನ್ನು ಹೊರತುಪಡಿಸಿ, ರಾಜ್ಯದ ಇತರೆ ಜಿಲ್ಲೆಗಳಲ್ಲಿ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ 'ಪಾರಂಪರಿಕ ಸಂರಕ್ಷಣಾ ಸಮಿತಿ'ಯನ್ನು ರಚಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಸದರಿ ರೆಗ್ಯೂಲೇಷನ್‌ರನ್ವಯ ಪಾರಂಪರಿಕ ಕಟ್ಟಡಗಳ / ತಾಣಗಳ ಗುರುತಿಸುವಿಕೆ, ಘೋಷಿಸುವಿಕೆ ಹಾಗೂ ವರ್ಗೀಕರಿಸುವಿಕೆಯನ್ನು ಆಯಾ ಜಿಲ್ಲೆಗಳ ಪಾರಂಪರಿಕ ಸಂರಕ್ಷಣಾ ಸಮಿತಿಯು ಮಾಡಬೇಕಾಗಿರುತ್ತದೆ ಹಾಗೂ ಯಾವುದೇ ಪಾರಂಪರಿಕ ಕಟ್ಟಡಗಳ ಸಂರಕ್ಷಣೆ, ನವೀಕರಣ, ವರ್ಗೀಕರಣ, ಸೌಂದರ್ಯೀಕರಣ ಮಾಡಬೇಕಾದ ಸಂದರ್ಭದಲ್ಲಿ ಪಾರಂಪರಿಕ ಸಂರಕ್ಷಣಾ ಸಮಿತಿಯ ಅನುಮೋದನೆಯನ್ನು ಪಡೆಯಬೇಕಾಗಿರುತ್ತದೆ. ಸದರಿ ಸಮಿತಿಗೆ ಆಯಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ ಹಾಗೂ ಆಯಾ ಜಿಲ್ಲೆಗಳ ನಗರಾಭಿವೃದ್ಧಿ ಪ್ರಾಧಿಕಾರದ ಆಯುಕ್ತರು ಸದಸ್ಯ-ಕಾರ್ಯದರ್ಶಿಗಳಾಗಿರುತ್ತಾರೆ.

ಮೈಸೂರು-ನಂಜನಗೂಡು ಸ್ಥಳೀಯ ಯೋಜನಾ ಪ್ರದೇಶಕ್ಕೆ ತಯಾರಿಸಿರುವ ಮಹಾಯೋಜನೆ-2031 (ಪರಿಷ್ಕೃತ-2) (ಸರ್ಕಾರದ ಆದೇಶ ಸಂಖ್ಯೆ: ನಅಇ 597 ಮೈಅಪ್ರಾ 2011(ಭಾಗ-2) ದಿನಾಂಕ: 12.01.2016) ರ ಪ್ರಕಾರ ಮೈಸೂರಿನ 131 ಪಾರಂಪರಿಕ ಕಟ್ಟಡಗಳನ್ನು ಗುರುತಿಸಿ ಪಟ್ಟಿ ಮಾಡಿ, ಪಾರಂಪರಿಕ ಕಟ್ಟಡಗಳೆಂದು ಘೋಷಿಸಲಾಗಿದೆ.

ಈ ಪಾರಂಪರಿಕ ಕಟ್ಟಡಗಳ ವಸ್ತುಸ್ಥಿತಿಯನ್ನು ಅರಿಯಲು ಪಾರಂಪರಿಕ ಉಪಸಮಿತಿಯನ್ನು ರಚಿಸಲಾಗಿದ್ದು, ಉಪಸಮಿತಿಯ ವತಿಯಿಂದ ಘೋಷಿತ ಪಾರಂಪರಿಕ ಕಟ್ಟಡಗಳ ಸರ್ವೆ ಕಾರ್ಯವನ್ನು ಕೈಗೊಳ್ಳಲಾಗುತ್ತಿದ್ದು, ಈ ಸಮಿತಿಯು ಈವರೆಗೆ 110 ಕಟ್ಟಡಗಳ ಸರ್ವೆ ಕಾರ್ಯವನ್ನು ಪೂರ್ಣಗೊಳಿಸಿದೆ. ಪಾರಂಪರಿಕ ಉಪಸಮಿತಿಯು ನೀಡುವ ಅಂತಿಮ ವರದಿಯನ್ವಯ ನಿಯಮಾನುಸಾರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.

**ಸಂಖ್ಯೆ: TOR 159 TDV 2023**

(ಎಚ್.ಕೆ.ಪಾಟೀಲ)
ಕಾನೂನು, ಸಂಸದೀಯ ವ್ಯವಹಾರಗಳು ಮತ್ತು
ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು